# ವಿಕ ಡೈಲಿ ಡಾಕ್ಟರ್



**ಡಾ.ಸಿ.ಎನ್.ಮಂಜುನಾಥ್**
ಮುಖ್ಯಸ್ಥರು, ಜಯದೇವ ಹೃದ್ರೋಗ ವಿಜ್ಞಾನ, ಸಂಶೋಧನಾ ಸಂಸ್ಥೆ



## ಎದೆನೋವು ಹೃದಯ ಸಮಸ್ಯೆ?

**ಪ್ರಶ್ನೆ:** ನನಗೆ ಕಳೆದ 4-5 ತಿಂಗಳಿಂದ ಎದೆನೋವು ಬರುತ್ತಿದೆ. ವೈದ್ಯರಲ್ಲಿ ತೋರಿಸಿದೆ. ಅವರು ಇಸಿಜಿ, ಟಿಎಂಟಿ, ಎಕೊ ಟೆಸ್ಟ್ ಮಾಡಿಸಿದ್ರು. ವೈದ್ಯರು ಏನೂ ಸಮಸ್ಯೆ ಇಲ್ಲ ಅಂದ್ರು. ಗ್ಯಾಸ್ಟ್ರಿಕ್ ಇರಬಹುದೆಂದು ಮತ್ತೊಬ್ಬ ವೈದ್ಯರ ಬಳಿ ತೋರಿಸಿ ಅದಕ್ಕೂ ಚಿಕಿತ್ಸೆ ಪಡೆದುಕೊಂಡೆ. ಆದರೂ ಎದೆನೋವು ಕಡಿಮೆ ಆಗಿಲ್ಲ, ಬೇರೇನಾದರೂ ಪರೀಕ್ಷೆ ಮಾಡಿಸಬೇಕೆ?

**-ರಮೇಶ್**, ದಾವಣಗೆರೆ



ನೀವು ನೀಡಿರುವ ಮಾಹಿತಿ ಪ್ರಕಾರ ನಿಮಗೆ ಎದೆನೋವು ಬರುತ್ತಿರುವುದು ಹೃದಯ ಸಮಸ್ಯೆಯಿಂದ ಅಲ್ಲ, ಇಸಿಜಿ, ಎಕೊ, ಟಿಎಂಟಿ ಟೆಸ್ಟ್ ನಾರ್ಮಲ್ ಅಂತ ಬಂದಿದೆ. ಆದರೂ ಎದೆನೋವು ಬರುತ್ತಿದೆಯೆಂದರೆ ಅದಕ್ಕೆ ಗಾಲ್ ಬ್ಲಾಡರ್ ಸಮಸ್ಯೆಯಿಂದಲೂ ನೋವು ಬರುತ್ತಿರಬಹುದು. ನೀವು ಕರುಳು ಹಾಗೂ ಗಾಲ್ ಬ್ಲಾಡರ್ ಪರೀಕ್ಷೆ ಮಾಡಿಸಿಕೊಳ್ಳಿ. ಎದೆ ನೋವು ಬಂದಾಕ್ಷಣ ಅದು ಹೃದಯಕ್ಕೆ ಸಂಬಂಧಿಸಿದ್ದು ಎಂದು ತಿಳಿದು ಭಯಗೊಳ್ಳಬಾರದು. ಪರೀಕ್ಷಿಸಿ ಚಿಕಿತ್ಸೆ ಪಡೆದುಕೊಳ್ಳಿ, ಪರಿಹಾರವಿದೆ.

**ನೀವೂ ಪ್ರಶ್ನೆ ಕೇಳಿ...**

ವಾಟ್ಸ್ಆ್ಯಪ್: 7899578866

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞ ವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.